Fax: 08282-256262
E-mail:kuvempuacademic@gmail.com

Phone No - 08282-256149
Website: www.kuvempu.ac.in

ಕುವೆಂಪು ವಿಶ್ವವಿದ್ಯಾಲಯ

ವಿಶ್ವವಿದ್ಯಾಲಯ ಕಾರ್ಯಾಲಯ, ಕುವೆಂಪು ಶತಮಾನೋತ್ಸವ ಭವನ, ಜ್ಞಾನಸಹ್ಯಾದ್ರಿ,
ಶಂಕರಘಟ್ಟ – 577451, ಶಿವಮೊಗ್ಗ ಜಿಲ್ಲೆ, ಕರ್ನಾಟಕ.

ಸಂಖ್ಯೆ:ಕುವಿ:ಶೈವಿ:ಎಸಿ–4(184): 3530 :2026–27 ದಿನಾಂಕ:30–10–2026

ಅಧಿಸೂಚನೆ

ವಿಷಯ : ವಿಶ್ವವಿದ್ಯಾಲಯದ 2026–27ನೇ ಶೈಕ್ಷಣಿಕ ಸಾಲಿನಿಂದ ಸ್ನಾತಕೋತ್ತರ ಪದವಿಗಳಾದ ಉರ್ದು, ಸಂಸ್ಕೃತ ಮತ್ತು ಔಷಧೀಯ ರಸಾಯನಶಾಸ್ತ್ರ ಕೋರ್ಸ್‌ಗಳ ಅಧ್ಯಯನ ವಿಭಾಗಗಳನ್ನು ಜ್ಞಾನಸಹ್ಯಾದ್ರಿ ಆವರಣಕ್ಕೆ ಸ್ಥಳಾಂತರಿಸಿರುವ ಕುರಿತು.

ಉಲ್ಲೇಖ: 1. ಈ ಕಛೇರಿ ಅಧಿಸೂಚನೆ ಸಂಖ್ಯೆ:ಕುವಿ:ಶೈವಿ:ಎಸಿ–4:184 :1102:2026–27, ದಿನಾಂಕ:29–06–2026.
2. ದಿನಾಂಕ:23–06–2026ರಂದು ನಡೆದ ಡೀನರು, ಶಾಲಾ ನಿರ್ದೇಶಕರುಗಳು ಹಾಗೂ ವಿಭಾಗಾಧ್ಯಕ್ಷರುಗಳ ಸಭೆಯ ನಿರ್ಣಯ.
3. ದಿನಾಂಕ:17–07–2026ರಂದು ನಡೆದ ಎಲ್ಲಾ ನಿಕಾಯದ ಡೀನರುಗಳ ಸಭೆಯ ನಿರ್ಣಯ.
4. ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ: 06-11-2026

*****

ಕುವೆಂಪು ವಿಶ್ವವಿದ್ಯಾಲಯವು 2026–27ನೇ ಸಾಲಿನ ಪ್ರವೇಶಾತಿಗೆ ಸಂಬಂಧಿಸಿದಂತೆ ಉಲ್ಲೇಖಿತ (1)ರ ಅಧಿಸೂಚನೆಯಲ್ಲಿ ಸ್ನಾತಕೋತ್ತರ ಕೇಂದ್ರ, ಚಿಕ್ಕಮಗಳೂರಿನಲ್ಲಿರುವ ವಾಣಿಜ್ಯಶಾಸ್ತ್ರ ಮತ್ತು ಗಣಿತಶಾಸ್ತ್ರ ವಿಭಾಗಗಳನ್ನು ವಿದ್ಯಾರ್ಥಿಗಳ ಪ್ರವೇಶಾತಿಯ ಕೊರತೆಯಿಂದ 2026–27ನೇ ಸಾಲಿನ ಪ್ರವೇಶಾತಿಯಿಂದ ಆಡಳಿತದ ಹಿತದೃಷ್ಟಿಯಿಂದಾಗಿ ಕೈಬಿಟ್ಟು ಅಧಿಸೂಚಿಸಲಾಗಿತ್ತು.

ಈ ಕುರಿತು ಉಲ್ಲೇಖಿತ (2) ಮತ್ತು (3)ರಲ್ಲಿ ಡೀನರು, ಶಾಲಾ ನಿರ್ದೇಶಕರುಗಳು ಹಾಗೂ ವಿಭಾಗಾಧ್ಯಕ್ಷರುಗಳ ಸಭೆಯಲ್ಲಿ ನಿರ್ಣಯಿಸಲಾದಂತೆ ಹಾಗೂ ಮಾನ್ಯ ಕುಲಪತಿಗಳ ಆದೇಶದಂತೆ ಸಹ್ಯಾದ್ರಿ ಕಾಲೇಜು ಆವರಣದಲ್ಲಿರುವ ಸ್ನಾತಕೋತ್ತರ ಕೋರ್ಸ್‌ಗಳಾದ ಉರ್ದು ಮತ್ತು ಸಂಸ್ಕೃತ ಅಧ್ಯಯನ ವಿಭಾಗಗಳನ್ನು ಜ್ಞಾನಸಹ್ಯಾದ್ರಿ ಆವರಣದ ನುಡಿ–ಲೋಕ ಕಟ್ಟಡಕ್ಕೆ ಹಾಗೂ ಸ್ನಾತಕೋತ್ತರ ಕೇಂದ್ರ, ಕಡೂರಿನಲ್ಲಿರುವ ಔಷಧೀಯ ರಸಾಯನಶಾಸ್ತ್ರ ಕೋರ್ಸ್‌ನ ಅಧ್ಯಯನ ವಿಭಾಗವನ್ನು ಜ್ಞಾನಸಹ್ಯಾದ್ರಿ ಆವರಣದ ಕೆಮಿಕಲ್ ಸೈನ್ಸ್ ಕಟ್ಟಡಕ್ಕೆ ಸ್ಥಳಾಂತರಿಸಲಾಗಿರುತ್ತದೆ. ಸದರಿ ಕೋರ್ಸ್‌ಗಳ ಸ್ಥಳಾಂತರ ಪ್ರಕ್ರಿಯೆಗೆ ಉಲ್ಲೇಖಿತ (4)ರಲ್ಲಿ ಮಾನ್ಯ ಕುಲಪತಿಗಳು ಅನುಮೋದನೆ ನೀಡಿರುವ ಹಿನ್ನೆಲೆಯಲ್ಲಿ ಸ್ಥಳಾಂತರ ಪ್ರಕ್ರಿಯೆಯನ್ನು ಈ ಮೂಲಕ ದಿನಾಂಕ:17–07–2026 ರಿಂದ ಪೂರ್ವಾನ್ವಯವಾಗುವಂತೆ ಅಧಿಕೃತಗೊಳಿಸಲಾಗಿದೆ.

ಕುಲಸಚಿವರು
ಕುವೆಂಪು ವಿಶ್ವವಿದ್ಯಾನಿಲಯ
ಜ್ಞಾನ ಸಹ್ಯಾದ್ರಿ
ಶಂಕರಘಟ್ಟ-577 451.
ಶಿವಮೊಗ್ಗ ಜಿಲ್ಲೆ.
06/11/26

ಗೆ,

1. ಎಲ್ಲಾ ಸ್ನಾತಕೋತ್ತರ ವಿಭಾಗದ ಮುಖ್ಯಸ್ಥರು, ಕುವೆಂಪು ವಿಶ್ವವಿದ್ಯಾಲಯ, ಜ್ಞಾನಸಹ್ಯಾದ್ರಿ ಶಂಕರಘಟ್ಟ/ಶಿವಮೊಗ್ಗ.
2. ಕುವೆಂಪು ವಿಶ್ವವಿದ್ಯಾಲಯದ ವ್ಯಾಪ್ತಿಗೊಳಪಡುವ ಶಿವಮೊಗ್ಗ/ ಚಿಕ್ಕಮಗಳೂರು ಜಿಲ್ಲೆಯ ಎಲ್ಲಾ ಘಟಕ/ ಸ್ನಾತಕೋತ್ತರ ಸಂಯೋಜಿತ ಕಾಲೇಜುಗಳ ಪ್ರಾಂಶುಪಾಲರುಗಳಿಗೆ.

ಪ್ರತಿಗಳು:

1. ಆಪ್ತ ಕಾರ್ಯಾಲಯ, ಕುಲಪತಿಗಳು: ಕುಲಸಚಿವರು: ಕುಲಸಚಿವರು(ಪರೀಕ್ಷಾಂಗ); ಹಣಕಾಸು ಅಧಿಕಾರಿಗಳು, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ.
2. ಕಛೇರಿ ಪ್ರತಿ.